ದಿಃ 09.10.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂ.ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ ಶ್ರೀ ಆರ್ ಸಿ ಎಸ್ ವಕೀಲರಿಂದ.**

ಜಮೀನು ಖರೀದಿಸುವುದಕ್ಕಿಂತ ಮೊದಲು ಪ್ರತಿವಾದಿ 4 ಮತ್ತು 5 ರವರು ಖರೀದಿಸಿರುವ ಪತ್ರವನ್ನು ನೋಡಿದ್ದೇನೆ ಸದರಿ ಪತ್ರದಲ್ಲಿ ಇರುವ ಚೆಕ್ಕುಬಂದಿಯ ಬಗ್ಗೆ ನನಗೆ ಗೊತ್ತಿಲ್ಲ ಸದರಿ ಪತ್ರದಲ್ಲಿ ಚೆಕ್ಕುಬಂದಿ ಪೂಃಕ್ಕೆ ಶೆಷಯ್ಯ ರವರ ಜಮೀನು, ಪಃಉಃಕ್ಕೆ ನಾರಾಯಣರೆಡ್ಡಿ ರವರ ಜಮೀನು, ದಃಕ್ಕೆ ಆಧ್ಯಮ್ಮ ಜಮೀನು ಇದೆ ಎಂದರೆ ಸರಿ. ಸದರಿ ಚೆಕ್ಕುಬಂದಿ ಪ್ರಕಾರ ಪತ್ರದ ಚೆಕ್ಕುಬಂದಿಯಲ್ಲಿ ಆಜು-ಬಾಜು ಕೆ ಎಸ್ ಆರ್ ಟಿ ಸಿ ಗೆ ಸಂಬಂಧಿಸಿದ ಸ್ವತ್ತು ಇದೆ ಎಂದು ನಮೂದಿಸಿಲ್ಲ. ನಾನು ಖರೀದಿಸಿದ ಸ್ವತ್ತಿನ ಪತ್ರದಲ್ಲಿ ಚೆಕ್ಕುಬಂದಿಯಲ್ಲಿ ಯಾವುದೇ ಕಡೆ ಕೆ ಎಸ್ ಆರ್ ಟಿ ಸಿ ಗೆ ಸಂಬಂಧಿಸಿದ ಸ್ವತ್ತು ಇದೆ ಎಂದು ನಮೂದಿಸಿಲ್ಲ ಎಂದರೆ ಸರಿ.

2. 4 ಮತ್ತು 5 ನೇ ಪ್ರತಿವಾದಿಯರು ಮತ್ತು 1 ನೇ ಪ್ರತಿವಾದಿ ಗಂಡ ಆದಿನಾರಾಯಣರೆಡ್ಡಿ ರವರು ಜಂಟಿಯಾಗಿ ಸರ್ವೇ ನಂ.57/2 ಅನ್ನು ಖರೀದಿಸಿರುತ್ತಾರೆ ಎಂದರೆ ಸರಿ. 4 ಮತ್ತು 5 ನೇ ಪ್ರತಿವಾದಿಯರು ಮತ್ತು 1 ನೇ ಪ್ರತಿವಾದಿ ಗಂಡ ಆದಿನಾರಾಯಣರೆಡ್ಡಿ ರವರು ಜಂಟಿಯಾಗಿ ನನಗೆ ಸ್ವತ್ತನ್ನು ಬರೆದುಕೊಟ್ಟಿರುತ್ತಾರೆ. ಅವರು ಸೈಟ್ ಗಳನು ವಿಭಾಗ ಮಾಡಿಕೊಂಡಿದ್ದಾರಾ ಅಥವಾ ಇಲ್ಲವಾ ನನಗೆ ಗೊತ್ತಿಲ್ಲ. ಕ್ರಯ ಪತ್ರದ ಆಧಾರದ ಮೇಲೆ ಈ ಖಾತಾ ನನ್ನ ಹೆಸರಿಗೆ ಬಂದಿದೆ ಎಂದರೆ ಸರಿ.

3. ನನಗೆ ಪರ್ಯಾಯವಾಗಿ ನಿವೇಶನ ನೀಡಲು ಬರೆದುಕೊಟ್ಟಿರುವ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. 1 ರಿಂದ 3 ನೇ ಪ್ರತಿವಾದಿಗಳು ದಿಃ 16.03.2005 ರ ಕ್ರಯ ಪತ್ರಕ್ಕೆ ಸಾಕ್ಷಿದಾರರಾಗಿ ಸಹಿ ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ. 2 ನೇ ಅನುಸೂಚಿತ ಸ್ವತ್ತಿನ ಸರ್ವೇ ನಂ.48/4 ಯಾರಿಗೆ ಸೇರಿದ್ದು ಎಂದು ತಿಳಿದುಕೊಂಡಿಲ್ಲ. ಸರ್ವೇ ನಂ.48/4 ಅನ್ನು ದಿಃ 09.03.2007 ರಲ್ಲಿ ಜಂಟಿಯಾಗಿ ಖರೀದಿ ಮಾಡಿದ ಸ್ವತ್ತು ಎಂದರೆ ಆದಿನಾರಾಯಣರೆಡ್ಡಿ ರವರು ಮಾತ್ರ ಖರೀದಿಸಿರುತ್ತಾರೆ.

4. ಸರ್ವೇ ನಂ.52/2 ಅನ್ನು 1 ನೇ ಪ್ರತಿವಾದಿಯು ಖರೀದಿಸಿದ್ದು, ಅದು ಅವರ

ಸ್ವಯಾರ್ಜಿತ ಸ್ವತ್ತು ಎಂದರೆ ಸರಿ. 2 ನೇ ದಾವಾ ಸ್ವತ್ತಿಗೂ 3 ಮತ್ತು 4 ನೇ ಪ್ರತಿವಾದಿ ರವರಿಗೆ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಿಪಿ 1 ಅನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ದಾವೆಯಲ್ಲಿ ಕೇಳಿದಂತೆ ಪರಿಹಾರ ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃಃ ಇಲ್ಲಾ.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಗಣಕೀಕರಣಗೊಳಿಸಲಾಯಿತು.)

ಓ ಹೇ ಕೇ ಸ ಇದೆ

ಸಿಜೆ ಮತ್ತು ಜೆಎಂಎಫ್ ಸಿ. ,
ಬಾಗೇಪಲ್ಲಿ